ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂರವಾಣಿ:080-22343904/05

ಕಾಲೇಜು ಶಿಕ್ಷಣ ಆಯುಕ್ತರ ಕಚೇರಿ
ಅರಮನೆ ರಸ್ತೆ, ಬೆಂಗಳೂರು-560001.

ಸಂಖ್ಯೆ:ಕಾಶಿಇ/ಶೈವಿ/67/ಶು.ವಿ/ಸುತ್ತೋಲೆ/2018-19

ದಿನಾಂಕ: 7.03.2019

# ಸುತ್ತೋಲೆ

ವಿಷಯ: ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿನಿಯರಿಗೆ ಶುಲ್ಕ ವಿನಾಯಿತಿ ನೀಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಇಡಿ 67 ಹೆಚ್‌ಪಿಯು 2018 ದಿನಾಂಕ:15.12.2018.
2) ಈ ಕಛೇರಿಯ ಆದೇಶ ಸಂಖ್ಯೆ:ಕಾಶಿಇ/ಶೈವಿ/67/ಶುಲ್ಕವಿನಾಯಿತಿ/2018-19 ದಿನಾಂಕ:23.02.2019. ಮತ್ತು ದಿನಾಂಕ:07.03.2019.

* * * * * * * *

2018-19 ನೇ ಸಾಲಿನಲ್ಲಿ ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿನಿಯರಿಗೆ ಶುಲ್ಕ ವಿನಾಯಿತಿ ನೀಡುವ ಸಂಬಂಧ ಲೆಕ್ಕ ಶೀರ್ಷಿಕೆ 2202-03-107-1-14-106 ರಡಿ ಅನುದಾನವನ್ನು ಒದಗಿಸಲಾಗಿದ್ದು. ಅದ್ದರಂತೆ ಉಲ್ಲೇಖ (2) ರಲ್ಲಿನ ಈ ಕಛೇರಿ ಸುತ್ತೋಲೆಗಳಲ್ಲಿ ಶುಲ್ಕ ಮರುಪಾವತಿಯ ಮೊತ್ತವನ್ನು ವಿದ್ಯಾರ್ಥಿನಿಯರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲು ತಿಳಿಸಿರುವ ಷರತ್ತುಗಳೊಂದಿಗೆ ಈ ಕೆಳಕಂಡ ಷರತ್ತುಗಳನ್ನು ಪಾಲಿಸುವಂತೆ ಸೂಚಿಸಲಾಗಿದೆ. ಅದರನ್ವಯ ಈಗಾಗೇ ಸೂಚಿಸಿರುವಂತೆ ಸರ್ಕಾರಿ/ಅರೆ ಸರ್ಕಾರಿ ಮತ್ತು ವಿಶ್ವವಿದ್ಯಾಲಯ ಶುಲ್ಕಗಳನ್ನು ಮಾತ್ರ ಮರುಪಾವತಿಸತಕ್ಕದ್ದು. ವಿಶ್ವವಿದ್ಯಾಲಯ ಶುಲ್ಕಗಳಲ್ಲಿ (ಪರೀಕ್ಷಾ ಪ್ರಮಾಣ ಪತ್ರ ಮತ್ತು ಘಟಿಕೋತ್ಸವ ಶುಲ್ಕಗಳನ್ನು ಹೊರತುಪಡಿಸಿ) ಇತರೆ ಪ್ರವೇಶಾತಿ ಮತ್ತು ಪರೀಕ್ಷಾ ಶುಲ್ಕಗಳನ್ನು ಮಾತ್ರ ಮರುಪಾವತಿಸತಕ್ಕದ್ದು.

ಕಾಲೇಜು ಶಿಕ್ಷಣ ಆಯುಕ್ತರು

**ಇವರಿಗೆ:**

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿಯನ್ನು:**

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ, ಕಲ್ಬುರ್ಗಿ.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
3. ಕಛೇರಿ ಪ್ರತಿ.